ಆ) ವಿಚಾರಣಾ ಆಯೋಗ ಕಾಯಿದೆ, ೧೯೫೨ರಡಿಯಲ್ಲಿ ಪ್ರೊಫೆಸರ್ ಬಶೀರ ಹುಸೇನರವರ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ವಕ್ಫ್ ವಿಚಾರಣಾ ಆಯೋಗವನ್ನು ಅಧಿಸೂಚನೆ ಸಂಖ್ಯೆ: ಆರ್‌ಡಿ ೧ ಡಬ್ಲ್ಯೂಇಎಸ್ ೮೭, ದಿನಾಂಕ ೨೫-೬-೮೮ರಲ್ಲಿ ನೇಮಿಸಲಾಗಿತ್ತು ಹಾಗೂ ಸದರಿ ಆಯೋಗದ ಅವಧಿಯು ದಿನಾಂಕ ೨೫-೧೨-೮೯ರಂದು ಕೊನೆಗೊಂಡಿತು. ಈ ಆಯೋಗವು ಸಲ್ಲಿಸಿದ ವರದಿಯನ್ನು ಕೇವಲ ಅಧ್ಯಕ್ಷರು ಮಾತ್ರ ಸಹಿ ಮಾಡಿದ್ದು, ಇನ್ನಿಬ್ಬರು ಸದಸ್ಯರು ಸಹಿ ಮಾಡಿರದಿದ್ದ ಕಾರಣ, ಕಾನೂನು ಇಲಾಖೆಯು ಸಲಹೆಯ ಮೇರೆಗೆ ಆ ವರದಿಯನ್ನು ಸರ್ಕಾರ ಅಂಗೀಕರಿಸಲಿಲ್ಲ. ಆದರೆ ಮುಂದೆ ಸರ್ಕಾರವು ಶ್ರೀ ಫಜಲುಲ್ಲಾ ರಜ್ವಿ, ಏಕ ಸದಸ್ಯ ವಕ್ಫ್ ವಿಚಾರಣಾ ಆಯೋಗವನ್ನು ಅಧಿಸೂಚನೆ ಸಂಖ್ಯೆ: ಆರ್‌ಡಿ ೨೨೭ ಡಬ್ಲ್ಯೂಇಎಸ್ ೮೯ ದಿನಾಂಕ ೧೨-[illegible]-೯೦ರಲ್ಲಿ ಒಂದು ವರ್ಷದ ಅವಧಿಗೆ ನೇಮಿಸಿದೆ.

ಈ ಆಯೋಗವು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ವಿಚಾರಣೆಯನ್ನು ನಡೆಸಲು ಉದ್ಯುಕ್ತವಾಗಿದೆ.

ಶ್ರೀ ರಜ್ವಿಯವರು ಕರ್ನಾಟಕ ಸರ್ಕಾರದ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದಾರೆ.

ಧರ್ಮ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.

೯೭. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).--ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ:

ಅ) ಕೊಲ್ಲಾಪುರ. ಸೊಲ್ಲಾಪುರ, ಪಾಂಡರಾಪುರ ಹಾ. ಮತ್ತು ತುಳಜಾಪುರ ದೇವಸ್ಥಾನಗಳಲ್ಲಿ ಯಾತ್ರಿಕರಿಗಾಗಿ ರಾಜ್ಯದ ಧರ್ಮಶಾಲೆಗಳನ್ನು ಪ್ರಾರಂಭಿಸಲು ತಡವಾಗಿರುವುದಕ್ಕೆ ಕಾರಣವೇನು?

ಆ) ಇದಕ್ಕಾಗಿ ಹಣಕಾಸಿನ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಕೊಲ್ಲಾಪುರದಲ್ಲಿ ಧರ್ಮಶಾಲೆ ಕಟ್ಟುವ ಯೋಜನೆ ಇಲ್ಲ. ತುಳಜಾಪುರದಲ್ಲಿ ಮಾತ್ರ ೪೨೫೭ ಚ. ಮೀ. ವಿಸ್ತೀರ್ಣದ ಜಾಗವನ್ನು ರೂ. ೧,೨೩,೯೭೫ಗಳಿಗೆ ಖರೀದಿಸಿದೆ. ೩ ಕಡೆಯಲ್ಲೂ ನಿವೇಶನವನ್ನು ಉಚಿತವಾಗಿ ಪಡೆಯಬೇಕೆಂದು ಮೊದಲು ಮಹಾರಾಷ್ಟ್ರ ಸರ್ಕಾರದೊಂದಿಗೆ ಹಾಗೂ ಸರ್ಕಾರದ ಹಲವು ಇಲಾಖೆಗಳೊಂದಿಗೆ ವ್ಯವಹರಿಸಬೇಕಿದ್ದರಿಂದ ಹಾಗೂ ಕೆಲವು ಕಾನೂನಿನ ತೊಡಕಿನಿಂದ ತಡವಾಗಿದೆ. ಅದೂ ಅಲ್ಲದೆ ಪಂಡರಾಪುರ ಮತ್ತು ಸೊಲ್ಲಾಪುರದಲ್ಲಿ ಆಯ್ಕೆ ಮಾಡಿದ ನಿವೇಶನಗಳನ್ನು ಈಗ ನೀಡಲು ಸಾಧ್ಯವಿಲ್ಲವೆಂದು ಮಹಾರಾಷ್ಟ್ರ ಸರ್ಕಾರ ತಿಳಿಸಿರುವುದರ ಹಿನ್ನಲೆಯಲ್ಲಿ ಬೇರೆ ನಿವೇಶನವನ್ನು ಈಗ ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಸೂಕ್ತ ನಿವೇಶನ ದೊರೆತ ನಂತರ ಅದಕ್ಕೆ ತಗಲುವ ವೆಚ್ಚವನ್ನು ಭರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಜಮೀನು ಮಾಲೀಕರಿಗೆ, ಭೂ ಹಿಡುವಳಿದಾರರಿಗೆ ಪಾಸ್ ಬುಕ್ ಕೊಡುವ ಬಗ್ಗೆ.

೯೮. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).——ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆ ಜಮೀನು ಪಾಸ್ ಬುಕ್ ಕೊಡುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಆ) ಜಮೀನಿನ ಬಗ್ಗೆ ವಿವರವಾದ ಮಾಹಿತಿಯನ್ನು ಕಂಪ್ಯೂಟರೈಸ್ ಮಾಡಲಿಕ್ಕೆ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಶೀಘ್ರವಾಗಿ ವಿತರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಇಂತಹ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.